ಅಸಲು ದಾವೆ ಸಂ. 428/2013-ಪಿಡಬ್ಲೂ.1

ದಿನಾಂಕ 17-01-2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರವಾಗಿ ಶ್ರೀ ಆರ್.ಡಿ.ಪಿ. ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಹೀರೆಕೊಡಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಹೀರೆಕೊಡಿ ಗ್ರಾಮವು ನನ್ನ ತವರು ಮನೆ ಎಂದರೆ ಸರಿ. ನಮ್ಮ ತಂದೆಗೆ ನಾಲ್ಕು ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಎಲ್ಲರೂ ಕೂಡಿಯೇ ಇರುತ್ತೇವೆ ಎಂದರೆ ಸರಿಯಲ್ಲ. ಸುಮಾರು 20-30 ವರ್ಷಗಳ ಹಿಂದಿನಿಂದಲೂ ನಾವು ಬೇಗೆ ಬೇರೆಯಾಹಿ ವಾಸವಿರುತ್ತೇವೆ. ಅದೇರೀತಿ ನನ್ನ ಹಾಗೂ ನನ್ನ ಅಕ್ಕ-ತಂಗಿಯರ ವಿವಾಹವಾಗಿರುತ್ತದೆ ಎಂದರೆ ಸರಿ. ನನ್ನ ಮದುವೆಯಾಗಿ ಸುಮಾರು 41 ವರ್ಷವಾಗಿರುತ್ತದೆ. ನನ್ನನ್ನು ವಡ್ರಾಳದ ಯಲ್ಲಪ್ಪಾ ಭಜಂತ್ರಿಯವರಿಗೆ ವಿವಾಹ ಮಾಡಿಕೊಟ್ಟಿದ್ದರು. ನಾನು ಈಗ ನನ್ನ ಗಂಡನ ಮನೆಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಹೀರೆಕೊಡಿಯಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಹಾಗೂ ನನ್ನ ಗಂಡನ ನಡುವೆ ಸಂಬಂಧ ಉತ್ತಮವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಜೊತೆ ಬಾಳ್ವೆ ಮಾಡಿರುವುದಿಲ್ಲ. ನಾನು ವಿವಾಹವಾದ ನಂತರ ನನ್ನ ಗಂಡನ ಕಡೆ ಹೊಗದೇ ಇದ್ದ ಕಾರಣ ನನ್ನ ಹಾಗೂ ನನ್ನ ಗಂಡನ ನಡುವೆ ಸಂಬಂಧ ಉತ್ತಮವಾಗಿರುವುದಿಲ್ಲ.

ನನ್ನ ಹಾಗೂ ನನ್ನ ಗಂಡನ ನಡುವೆ ವಿವಾಹ ವಿಚ್ಛೇದನವಾಗಿರುವುದಿಲ್ಲ. ನಾನು ನನ್ನ ಗಂಡನ ಮನೆಗೆ ಹೋಗಿಲ್ಲ ಹಾಗೂ ಹೀರೆಕೊಡಿಯಲ್ಲಿ ವಾಸವಾಗಿರುತ್ತೇನೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮಹಾದೇವ ಮಾರ್ಗಾರರಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಅದೇರೀತಿ ನನ್ನ ಹಾಗೂ ಮಹಾದೇವ ಮಾರ್ಗಾರವರ ಮನೆತನಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಮಹಾದೇವ ಮಾರ್ಗಾರವರಿಗೆ ಎಷ್ಟು ಆಸ್ತಿಗಳು ಇವೆ ಹಾಗೂ ಅವುಗಳು ಹೇಗೆ ಬಂದಿವೆ ಎಂದು ತಮಗೆ ಗೊತ್ತಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯ 26 ಗುಂಟೆಯ 2 ಪಟ್ಟಿಗಳು ಇರುತ್ತವೆ ಎಂದು ನುಡಿಯುತ್ತಾರೆ. ಆದರೆ ಅದರ ಸರ್ವೇ ನಂಬರ ನನಗೆ ಗೊತ್ತಿರುವುದಿಲ್ಲ ಎಂದು ಸಹ ನುಡಿಯುತ್ತಾರೆ. ಕಾರಣ ನಾನು ಶಾಲೆ ಕಲಿತಿರುವುದಿಲ್ಲ.

ಪ್ರತಿವಾದಿಯರಿಗೆ ಆಸ್ತಿಗಳು ಹೇಗೆ ಬಂದಿವೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚಕ್ಕುಬಂದಿಯನ್ನು ಹೇಳಲು ಬರುವುದಿಲ್ಲ. ಮಹಾದೇವ ಮಾರ್ಗಾರ ಯಾವಾಗ ಮೃತರಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮಹಾದೇವ ಮಾರ್ಗಾರವರ ವಾರಸುದಾರರು ಯಾರು ಎಂದು ನನಗೆ ಗೊತ್ತಿರುತ್ತದೆ. ಅವರ ಹೆಸರುಗಳು ತಾರಾಬಾಯಿ, ರಾಮಾ, ಲಕ್ಷ್ಮಣ ಸದರಿ ಮಹಾದೇವ ಮಾರ್ಗಾರವರಿಗೆ ನಾನು ಮೇಲೆ ಹೇಳಿದಂತೆ ಇಬ್ಬರು ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು ಇರುತ್ತಾಳೆ. ತಾರಾಬಾಯಿ ಹಿಂದೆ ಜುಗುಳ ಗ್ರಾಮದಲ್ಲಿದ್ದು ಈಗ ಹೀರೆಕೊಡಿಯಲ್ಲಿ ಇರುತ್ತಾಳೆ. ರಾಮಚಂದ್ರ ಈತನು ಮೃತನಾಗಿರುತ್ತಾನೆ. ರಾಮಚಂದ್ರನ ವಾರಸುದಾರರು ಯಾರು ಇಲ್ಲ. ಲಕ್ಷ್ಮಣ ಎಲ್ಲಿ ಇರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ.

ಲಕ್ಷ್ಮಣನನ್ನು ಸದರಿ ಪ್ರಕರಣದಲ್ಲಿ ಪಕ್ಷಗಾರನನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಲಕ್ಷ್ಮಣನು ಮಹಾದೇವ ಮಾರ್ಗಾರನ ವಂಶಸ್ತ ಆದ ಕಾರಣ ಅವನನ್ನು ಸದರಿ ಪ್ರಕರಣದಲ್ಲಿ ಪಕ್ಷಗಾರನನ್ನಾಗಿ ಮಾಡಲು ನನಗೆ ಯಾವುದೇ ಅಡಚಣೆ ಇರಲಿಲ್ಲ.

ಮಹಾದೇವ ಮಾರ್ಗಾರನ ಆಸ್ತಿಗಳಲ್ಲಿ ಏನೇನು ವ್ಯವಹಾರಗಳಾಗಿವೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಅದೇರೀತಿ ಮಹಾದೇವ ಮಾರ್ಗಾರ ಮೃತರಾದ ನಂತರ ಆತನ ಆಸ್ತಿಗಳು ಯಾರ ಹೆಸರಿನಲ್ಲಿ ನಮೂದು ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಮಹಾದೇವ ಮಾರ್ಗಾರವರು ಮೃತರಾದ ನಂತರ ಅವರ ವಾರಸುದಾರರ ನಡುವೆ ಯಾವ ಯಾವ ಪ್ರಕರಣಗಳು ಯಾವ ಯಾವ ಆಸ್ತಿಗೆ ದಾಖಲಾಗಿವೆ ಎಂಬುದರ ಬಗ್ಗೆ ನನಗೆ ಮಾಹಿತಿ ಇದ್ದು,

ಸದರಿ ಪ್ರಕರಣಗಳನ್ನು ತಾರಾಬಾಯಿ, ರಾಮಚಂದ್ರ ರವರ ಮೇಲೆ ಸುಶೀಲಾ ಮಹಾದೇವ ಮಾಳಿ ರವರು ಸಲ್ಲಿಸಿರುತ್ತಾರೆ. ಸದರಿ ಪ್ರಕರಣವನ್ನು ತನ್ನನ್ನು ನೋಡಿಕೊಳ್ಳಲಿಲ್ಲ ಎಂದು ಸುಶೀಲಾ ಮಹಾದೇವ ಮಾಳಿ ಆಕೆಯ ಮಗಳ ಮೇಲೆ ಸಲ್ಲಿಸಿರುತ್ತಾಳೆ.

ಸದರಿ ನಾನು ಮೇಲೆ ಹೇಳಿದ ವಿಚಾರಗಳನ್ನು ದಾವಾ ಹಾಕುವ ಸಂದರ್ಭದಲ್ಲಿ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ. ಮೇಲೆ ಹೇಳಿದ ಪ್ರಕರಣಗಳನ್ನು ಯಾವ ವರ್ಷದಲ್ಲಿ ಹಾಗೂ ಯಾರ ಯಾರ ಮಧ್ಯೆ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಹೆಸರು ಹೀರೆಕೊಡಿಯ ರೇಶನ್ ಮತ್ತು ಆಧಾರ್ ಕಾರ್ಡ್‌ಗಳಲ್ಲಿ ನಮೂದು ಇಲ್ಲ ಎಂದರೆ ಸರಿ. ಅದೇರೀತಿ ಚುನಾವಣಾ ಗುರುತಿನ ಚೀಟಿಯೂ ಸಹ ಇರುವುದಿಲ್ಲ. ನನಗೆ ಬೇರೆ ಯಾವ ಊರಿನಲ್ಲೂ ಆಧಾರ್ ಮತ್ತು ರೇಶನ್ ಕಾರ್ಡ ಇರುವುದಿಲ್ಲ. ನಾನು ಹೀರೆಕೊಡಿ ಗ್ರಾಮದ ತಹಶೀಲ್ದಾರ ಕಛೇರಿಯಲ್ಲಿ ಅರ್ಜಿಯನ್ನು ಕೊಟ್ಟು ಆಧಾರ್ ಕಾರ್ಡ್ ಹಾಗೂ ರೇಶನ್ ಕಾರ್ಡನ್ನು ನನ್ನ ಹೆಸರಿಗೆ ಕಡಿತ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಮಾರು 35 ರಿಂದ 40 ವರ್ಷಗಳಿಂದಲೂ ಸಹ ನಾನು ಹೀರೆಕೊಡಿ ಗ್ರಾಮದಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ.

ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

(ಮಂಜುಳ ಬಿ.)
೧ ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.